**IN THE COURT OF THE SENIOR CIVIL JUDGE AND JMFC, TIPTUR.**

**CC No. 34/2018 CW-11**

**PW-5**

**Oath is Administered to the Witness on 10.09.2024**

| | | |
|---|---|---|
| **Witness Name** | **:** | **Lakshmi KR** |
| **Husband Name** | **:** | **Yogeesh** |
| **Age** | **:** | **43 years** |
| **Occupation** | **:** | **WHC 221, SP office** |
| **Address** | **:** | **Hassan** |

**Chief Examination: By Assistant Public Prosecutor:-**

ನಾನು ಹಾಸನದ ಪಿಐ ಕಚೇರಿಯಲ್ಲಿ WPC ಆಗಿ 2015 ರಿಂದ 2020 ರವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ.

**2.** ದಿಃ 25.03.2017 ರಂದು ಪಿಐ ಚಾಸಾ 16 ಮತ್ತು ಚಾಸಾ 12 ಮತ್ತು 13 ರವರು ಹಾಸನದ ರಿಂಗ್ ರಸ್ತೆಯ ಚೌಡೇಶ್ವರಿ ದೇವಸ್ಥಾನದ ಬಳಿ ಗಸ್ತು ಮಾಡುತ್ತಿದ್ದಾಗ ಒಬ್ಬ ವ್ಯಕ್ತಿಯು ಅನುಮಾನಾಸ್ಪದ ರೀತಿಯಲ್ಲಿ ಬಿಳಿ ಆ್ಯಕ್ಟಿವಾ ಹೊಂಡಾವನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದಾಗ ಅನುಮಾನಗೊಂಡು ಆತನನ್ನು ಹಿಡಿದು ತಪಾಸಣೆ ಮಾಡಿ, ಠಾಣೆಗೆ ಆತನನ್ನು ಕರೆದುಕೊಂಡು ಬಂದು ವಿಚಾರಿಸಿದಾಗ, ಸದರಿ ಆ್ಯಕ್ಟಿವಾ ಹೊಂಡಾವನ್ನು ಮಂಡ್ಯದಲ್ಲಿ ವೆಂಕಟೇಶ್ ರವರೊಂದಿಗೆ ಕಳ್ಳತನ ಮಾಡಿಕೊಂಡು ಬಂದಿರುವುದಾಗಿ ತಿಳಿಸಿದ್ದು, ಆತನ ಹೆಸರು ವಿಜಯ್ ಕುಮಾರ್ ಅಲಿಯಾಸ್ ಬಡ್ಡಾ ವಿಜಿ, ವಾಸಃ ರಾಜಘಟ್ಟ, ಹಾಸನ ಎಂದು ತಿಳಿಸಿದನು. ಆತನನ್ನು ಪುನಃ ವಿಚಾರಿಸಿದಾಗ ಆತ ತಿಪಟೂರಿನ ಸಂತೋಷ್ ಮತ್ತು ವೆಂಕಟೇಶ ಹಾಗೂ

ಬೀರನಹಳ್ಳಿಕೆರೆಯ ಮಂಜ ರವರು ಕೂಡಿ ಮನೆಗಳ್ಳತನ ಮಾಡಿದ್ದಾಗಿ ಮತ್ತು ಅದರಿಂದ ಬಂದ ಹಣವನ್ನು 3 ಜನ ಹಂಚಿಕೊಳ್ಳುತ್ತಿದ್ದರು ಎಂದು ತಿಳಿಸಿದನು ಮತ್ತು ಕಳ್ಳತನ ಮಾಡಿಕೊಂಡು ಬಂದ ಒಡವೆಗಳನ್ನು ಮಣಪ್ಪುರಂ ಫೈನಾನ್ಸ್, ಬಿಎಂ ರಸ್ತೆ, ಹಾಸನದಲ್ಲಿ ಗಿರವಿ ಇಟ್ಟಿರುವುದಾಗಿ ತಿಳಿಸಿರುತ್ತಾರೆ. ಅವರ ಸಂಬಂದಿಕರಾದ ಮಂಜೇಗೌಡ ಮತ್ತು ವಿಜಯಲಕ್ಷ್ಮಿ ರವರ ಹೆಸರಿನಲ್ಲಿ ಗಿರವಿ ಇಟ್ಟಿರುವುದಾಗಿ ತಿಳಿಸಿರುತ್ತಾರೆ. ಸದರಿ ಮಹಜರ್ ಗೆ ನನಗೂ ಸಹ ಚಾಸಾ 16 ರವರು ಕರೆಸಿದ್ದು, ನಾನು ಮತ್ತು ಚಾಸಾ 10 ರವರು ಚಾಸಾ 16 ರವರ ಜೊತೆಯಲ್ಲಿ ಆರೋಪಿಯಾದ ವಿಜಯ್ ಕುಮಾರ್ ಜೊತೆ ಮಣಪ್ಪುರಂ ಫೈನಾನ್ಸ್ ಗೆ ಹೋಗಿರುತ್ತೇವೆ. ಅಲ್ಲಿ ಚೇತನ್ ಎನ್ನುವ ಮಣಪ್ಪುರಂ ಸಂಸ್ಥೆಯ ವ್ಯವಸ್ಥಾಪಕರು ಕೆಲವು ಆಭರಣಗಳನ್ನು ಹೊಂದಿದ್ದ ಕವರ್ ಗಳನ್ನು ತೋರಿಸಿದ್ದು, ಅವುಗಳಲ್ಲಿ ಒಂದು ಕವರ್ ತಿಪಟೂರು ನಗರ ಪೋಲೀಸ್ ಠಾಣೆಗೆ ಸಂಬಂದಿಸಿದ್ದಾಗಿದ್ದು, ಅದರಲ್ಲಿ 31 ಗ್ರಾಂನ ಚಿನ್ನದ ನೆಕ್ಲೆಸ್, 27 ಗಾಂನ ಒಂದು ಚಿನ್ನದ ಸರ ಇದ್ದು, ಅವುಗಳನ್ನು ಚಾಸಾ 16 ರವರು ನಮ್ಮ ಸಮಕ್ಷಮ ಅಮಾನತ್ ಪಡಿಸಿಕೊಂಡಿರುತ್ತಾರೆ. ಈ ಬಗ್ಗೆ ಅಮಾನತ್ ಮಹಜರ್ ನ್ನು ಚಾಸಾ 16 ರವರು ನಿಪಿ 6 ರಂತೆ ಮಧ್ಯಾಹ್ನ 12-00 ರಿಂದ 2-00 ರವರೆಗೆ ಮಾಡಿರುತ್ತಾರೆ. ಈ ಬಗ್ಗೆ ನಾನು ಹೇಳಿಕೆ ಸಹ ನೀಡಿರುತ್ತೇನೆ.

**3.** ಆ ದಿನ ಆರೋಪಿ 1 ರವರು ಚಾಲನೆ ಮಾಡುತ್ತಿದ್ದ ದ್ವಿಚಕ್ರ ವಾಹನದ ಸಂಖ್ಯೆ ಕೆಎ-11-ಇಬಿ-9694 ಆಗಿರುತ್ತದೆ.

**4.** ಆರೋಪಿ 1 ರವರು ಈ ದಿನ ನ್ಯಾಯಾಲಯಕ್ಕೆ ಗೈರು ಹಾಜರಿದ್ದು, ಆತನನ್ನು ಗುರುತಿಸಲು ಆತನ ಪರ ಶ್ರೀ ಬಿಎಸ್ ವಕೀಲರು

ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ.

**Cross examination by: Sri. BS Counsel for accused.**

ಆ ದಿನ ಆರೋಪಿ 1 ರವರು ವಾಹನ ಚಾಲನೆ ಮಾಡಿಕೊಂಡು ಬರುತ್ತಿದ್ದರು ಎಂದು ನಾನು ಹೇಳಿದ್ದು, ಸದರಿ ವಾಹನದ ಸಂಖ್ಯೆ ಕೆಎ-13-ಇಬಿ-9694 ಆಗಿತ್ತು. ಆ ದಿನ ಆರೋಪಿ 1 ರವರು ಸದರಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದಿದ್ದಾಗಿ ಹೇಳಿದ್ದು, ಆ ದಿನ ನಾನು ಸ್ಥಳದಲ್ಲಿ ಇರಲಿಲ್ಲ. ಆಗ ನಾನು ಪೋಲೀಸ್ ಠಾಣೆಯಲ್ಲಿದ್ದೆ. ಆ ದಿನ ಮಹಜರ್ ಗೆ ಕರೆದುಕೊಂಡು ಹೋಗಿದ್ದರು ಎಂದು ಹೇಳಿದ್ದು, ನಮ್ಮ ಇಲಾಖಾ ಜೀಪ್ ನಲ್ಲಿ ಕರೆದುಕೊಂಡು ಹೋಗಿದ್ದರು. ಆರೋಪಿ, ನಾನು, ಚಾಸಾ 10 ಮತ್ತು 11 ರವರು ಹೋಗಿದ್ದೆವು. ನಮ್ಮ ಜೊತೆಯಲ್ಲಿ ಪಂಚರು ಬಂದಿರಲಿಲ್ಲ. ನಾವು ಹೋಗುವಷ್ಟರಲ್ಲಿ ಪಂಚರು ಸ್ಥಳದಲ್ಲಿಯೇ ಇದ್ದರು. ನಾವು ಠಾಣೆಯನ್ನು ಮದ್ಯಾಹ್ನ 12 ಗಂಟೆಗೆ ಬಿಟ್ಟಿದ್ದೆವು. ನಾವು ಹೋಗಿದ್ದೆವು ಎಂದು ಹೇಳಿದ ನಮ್ಮ ಇಲಾಖಾ ಜೀಪ್ ಸಂಖ್ಯೆಯನ್ನು ಈಗ ನನಗೆ ಹೇಳಲು ಆಗುವುದಿಲ್ಲ. ನಮ್ಮ ಠಾಣೆಯಿಂದ ಮಣಪ್ಪುರಂ ಪೈನಾನ್ಸ್ ಸುಮಾರು 500 ಮೀಟರ್ ದೂರದಲ್ಲಿದೆ. ಅಲ್ಲಿಗೆ ನಾವು ಹೋದಾಗ ಮದ್ಯಾಹ್ನ 12-15 ಗಂಟೆ ಆಗಿತ್ತು. ಮಹಜರ್ ನ್ನು ಯಾರು ಟೈಪ್ ಮಾಡಿದ್ದರು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಅದರ ಪ್ರಿಂಟ್ ನ್ನು ಎಲ್ಲಿ ತೆಗೆದಿದ್ದರು ಎಂದು ನನಗೆ ಹೇಳಲು ಆಗುವುದಿಲ್ಲ. ನಿಪಿ 6 ರಲ್ಲಿ ಹೇಳಿರುವಂತಹ ರಶೀದಿಗಳ ನಂಬರ್ ನ್ನು ನನಗೆ ಈಗ ಹೇಳಲು ಆಗುವುದಿಲ್ಲ. ಆ ಫೈನಾನ್ಸ್ ನ ಮುಖ್ಯದ್ವಾರ ಯಾವ ದಿಕ್ಕಿನಲ್ಲಿತ್ತು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಅಲ್ಲಿ ಚೇತನ್ ಎನ್ನುವ ವ್ಯವಸ್ಥಾಪಕರು ಇದ್ದರು.

**2.** ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸ್ಥಳಕ್ಕೆ ಹೋಗಿಲ್ಲ, ಅಲ್ಲಿ ಯಾವುದೇ ಮಹಜರ್ ನ್ನು ಬರೆದಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ರವರನ್ನು ಎಲ್ಲಿಂದ ಹಿಡಿದುಕೊಂಡು ಬಂದಿದ್ದರು ಎಂದು ನನಗೆ ಖುದ್ದು ಮಾಹಿತಿ ಇರುವುದಿಲ್ಲ ಮತ್ತು ಅದನ್ನು ನನಗೆ ಚಾಸಾ 16 ರವರು ತಿಳಿಸಿದ್ದರು.

**3.** ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ 1 ಇವರನ್ನು ನಾನು ಆ ದಿನ ನಾನು ನೋಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಬರೆದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ 6 ನ್ನು ಈ ಪ್ರಕರಣಕ್ಕಾಗಿ ನಾನು ಮತ್ತು ನಮ್ಮ ಅಧಿಕಾರಿಗಳು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳ ಮಾತು ಕೇಳಿಕೊಂಡು ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Re- **Examination NIL**

**(R.O.A & I.C.)**
sd/-

**(Mohamed Arifulla C.F)**
SENIOR CIVIL JUDGE JMFC,
TIPTUR